■ ವಿಶಾಖ ಎನ್.

# ‘ಮಾತೃಭೂಮಿ’ ಆದ ‘ಬ್ಯಾಟಲ್ ಆಫ್ ಗಲ್ವಾನ್’

ಸಲ್ಮಾನ್ ಖಾನ್ ಅಭಿನಯದ ‘ಬ್ಯಾಟಲ್ ಆಫ್ ಗಲ್ವಾನ್’ ಚಿತ್ರದ ಶೀರ್ಷಿಕೆಯನ್ನು ‘ಮಾತೃಭೂಮಿ: ಮೇ ವಾರ್ ರೆಸ್ಟ್ ಇನ್ ಪೀಸ್’ ಎಂದು ಬದಲಿಸಲಾಗಿದೆ.

ಅಪೂರ್ವ ಲಾಖಿಯ ನಿರ್ದೇಶನದ ಈ ಸಿನಿಮಾದಲ್ಲಿ ಭಾರತ ಹಾಗೂ ಚೀನಾ ನಡುವಿನ ಸಂಘರ್ಷದ ಕಥೆ ಇದೆ. ‘ಬ್ಯಾಟಲ್’ ಎನ್ನುವ ಶೀರ್ಷಿಕೆಯು ಕೇವಲ ಸಂಘರ್ಷ ಇದೆ ಎಂಬ ತಪ್ಪು ಅರ್ಥ ಕೊಡುತ್ತದೆ. ಹೀಗಾಗಿ ಶೀರ್ಷಿಕೆಯನ್ನು ಇನ್ನಷ್ಟು ಮಾನವೀಯಗೊಳಿಸಲು ಬದಲಿಸಲಾಯಿತು ಎಂದು ನಿರ್ದೇಶಕ ಅಪೂರ್ವ ತಿಳಿಸಿದರು.

ಅಂದುಕೊಂಡಂತೆ ಎಲ್ಲವೂ ಆಗಿದ್ದರೆ ಈ ಸಿನಿಮಾ ಇಷ್ಟು ಹೊತ್ತಿಗೆ ತೆರೆಕಾಣಬೇಕಿತ್ತು. ಇದೇ ವರ್ಷ ಜನವರಿಯಲ್ಲಿ ನಟ ಪ್ರಶಾಂತ್ ತಮಾಂಗ್ ಅವರು ಹೃದಯಸ್ತಂಭನದಿಂದ ಅಗಲಿದರು. ಚಿತ್ರದಲ್ಲಿ ಪ್ರತಿನಾಯಕನ ಪಾತ್ರದಲ್ಲಿ ಅವರು ಅಭಿನಯಿಸಿದ್ದಾರೆ. ‘ಇಂಡಿಯನ್ ಐಡಲ್’ ಸ್ಪರ್ಧೆಯ ವಿಜೇತರಾಗಿದ್ದ ಅವರ ಪ್ರತಿಭೆಯನ್ನು ಗಮನಿಸಿ, ಚಿತ್ರದ ಪ್ರಮುಖ ಪಾತ್ರಕ್ಕೆ ಆಯ್ಕೆ ಮಾಡಲಾಗಿತ್ತು. ದುರದೃಷ್ಟವಶಾತ್ ಅವರ ಅಗಲಿಕೆಯು ಚಿತ್ರತಂಡದ ಎದುರು ಸವಾಲೊಂದನ್ನು ಇಟ್ಟಿತು. ಅವರು ಇನ್ನೂ ಕೆಲವು ಪ್ರಮುಖ ದೃಶ್ಯಗಳಲ್ಲಿ ಅಭಿನಯಿಸಬೇಕಿತ್ತು. ಆದರೆ, ಅದಾಗಲೇ ಸಾಹಸ ದೃಶ್ಯಗಳೂ ಸೇರಿದಂತೆ ಕೆಲವು ಕ್ಲೋಸ್ ಅಪ್ ದೃಶ್ಯಗಳಲ್ಲಿ ಅವರು ಛಾಪು ಮೂಡಿಸಿದ್ದರು. ಅವರ ಪಾತ್ರಕ್ಕೆ ಬೇರೆಯವರನ್ನು ಆಯ್ಕೆ ಮಾಡಿ, ಮತ್ತೆ ಅಷ್ಟೂ ಭಾಗಗಳ ಮರುಚಿತ್ರೀಕರಣ ನಡೆಸುವುದು ದುಬಾರಿ ಬಾಬತ್ತು. ಹೀಗಾಗಿ ನಿರ್ದೇಶಕ ಅಪೂರ್ವ ಪರ್ಯಾಯಗಳನ್ನು ಆಲೋಚಿಸತೊಡಗಿದರು.

ಬೇರೆ ಯಾರಿಂದಲಾದರೂ ಉಳಿದ ಭಾಗಗಳನ್ನು ಶೂಟ್ ಮಾಡಿಸಿ, ವಿ ಎಫ್ ಎಕ್ಸ್ ಮೂಲಕ ಪ್ರಶಾಂತ್ ಅವರ ಮುಖವನ್ನು ‘ಸೂಪರ್ ಇಂಪೋಸ್’ ಮಾಡುವುದು ಹೊಳೆದ ಇನ್ನೊಂದು ಉಪಾಯ. ಅದಕ್ಕೆ ಪ್ರಶಾಂತ್ ಅವರ ಕುಟುಂಬದವರ ಅನುಮತಿ ಪಡೆಯುವುದು ಮುಖ್ಯವಾಗಿತ್ತು. ಅಲ್ಲದೆ, ಸಲ್ಮಾನ್ ಖಾನ್ ಅವರ ಇನ್ನಷ್ಟು ಡೇಟ್ಸ್ ಪಡೆದುಕೊಳ್ಳುವುದೂ ಅಗತ್ಯವಿತ್ತು.

ಈ ಎಲ್ಲಾ ಕಾರಣಗಳಿಂದಾಗಿ ಸಿನಿಮಾ ಬಿಡುಗಡೆ ಮುಂದಕ್ಕೆ ಹೋಯಿತು. ಏಪ್ರಿಲ್ ತಿಂಗಳಲ್ಲಿ ಸಿನಿಮಾ ತೆರೆಗೆ ತರುವ ಉದ್ದೇಶ ನಿರ್ಮಾಪಕರೂ ಆಗಿರುವ ಸಲ್ಮಾನ್ ಅವರದ್ದು. ಈ ಸಿನಿಮಾದಲ್ಲಿ ಸಲ್ಮಾನ್ ಅವರೊಟ್ಟಿಗೆ ಚಿತ್ರಾಂಗದ ಸಿಂಗ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ■





# ರಾಮ್ ಚರಣ್ ಕಣ್ಣಿಗೆ ಗಾಯ

ರಾಮ್ ಚರಣ್ ಮಾರ್ಚ್ 27ರಂದು ತಮ್ಮನ್ನು ಕಾಣಲು ಬಂದಿದ್ದ ಅಭಿಮಾನಿಗಳನ್ನು ನಿರಾಸೆಗೊಳಿಸಲಿಲ್ಲ. ಆ ದಿನ ಅವರ ಹುಟ್ಟುಹಬ್ಬ. ‘ಪೆದ್ದಿ’ ತೆಲುಗು ಸಿನಿಮಾ ಚಿತ್ರೀಕರಣ ನಡೆಯುತ್ತಿದ್ದ ಸ್ಥಳಕ್ಕೇ ಅಭಿಮಾನಿಗಳು ಲಗ್ಗೆ ಇಟ್ಟರು. ಕಪ್ಪು ಲುಂಗಿ, ಕಪ್ಪು ಅಂಗಿ ತೊಟ್ಟಿದ್ದ ರಾಮ್ ಚರಣ್ ಅಭಿಮಾನಿಗಳ ನಡುವೆ ಬಂದು ನಿಂತರು. ‘ಪೆದ್ದಿ’ ಸಿನಿಮಾ ‘ಚಿಕಿರಿ ಚಿಕಿರಿ’ ಹಾಡಿನ ಜನಪ್ರಿಯತೆಯಿಂದ ಜನರಲ್ಲಿ ನಿರೀಕ್ಷೆಯ ಬೀಜ ಬಿತ್ತಿದೆ. ನಿರ್ದೇಶಕ ಬುಚ್ಚಿ ಬಾಬು ಸನಾ ಕ್ರೀಡಾ ಡ್ರಾಮಾ ಇರುವ ಈ ಸಿನಿಮಾವನ್ನು ಮೇಲೆತ್ತಲು ಏನೆಲ್ಲ ಸಾಧ್ಯವೋ ಎಲ್ಲವನ್ನೂ ಮಾಡುತ್ತಿದ್ದಾರೆ ಎಂದು ಖುದ್ದು ರಾಮ್ ಚರಣ್ ಹೇಳಿದ್ದಾರೆ.

ಸಾಹಸ ದೃಶ್ಯವೊಂದರ ಚಿತ್ರೀಕರಣ ನಡೆಯುವಾಗ ಆಕಸ್ಮಿಕವಾಗಿ ಅವಘಡ ಸಂಭವಿಸಿತು. ಆಗ ರಾಮ್ ಚರಣ್ ಅವರ ಕಣ್ಣಿಗೆ ಸ್ವಲ್ಪ ಪೆಟ್ಟು ಬಿದ್ದಿತು. ಅವರು ತಕ್ಷಣವೇ ಆಸ್ಪತ್ರೆಗೆ ತೆರಳಿ ಅಗತ್ಯ ಚಿಕಿತ್ಸೆಗೆ ಒಳಗಾದರು. ತಮ್ಮ ಹುಟ್ಟುಹಬ್ಬದ ದಿನ ಕೂಡ ಅವರ ಕಣ್ಣಿನ ಮೇಲ್ಭಾಗದಲ್ಲಿ ಬ್ಯಾಂಡೇಜ್ ಹಾಕಲಾಗಿತ್ತು.



ಜಾಹ್ನವಿ ಕಪೂರ್

ರಾಮ್ ಚರಣ್ ಅವರಿಗೆ ತೀವ್ರ ಸ್ವರೂಪದ ಪೆಟ್ಟಾಗಿದೆ ಎಂದು ವದಂತಿ ಹಬ್ಬಿತ್ತು. ಹೀಗಾಗಿ ಚಿತ್ರತಂಡದವರು ಮಾರ್ಚ್ 25ರಂದು ಒಂದು ಮಾಧ್ಯಮ ಪ್ರಕಟಣೆ ಹೊರಡಿಸಿ, ಸ್ಪಷ್ಟನೆ ನೀಡಿದರು. ರಾಮ್ ಚರಣ್ ಅವರ ಕಣ್ಣಿಗೆ ಸಣ್ಣ ಪೆಟ್ಟಾಗಿದೆ ಎಂದು ತಿಳಿಸಿದರು.

ಜಾಹ್ನವಿ ಕಪೂರ್ ಈ ಸಿನಿಮಾದಲ್ಲಿ ರಾಮ್ ಚರಣ್ ಅವರಿಗೆ ಜೋಡಿಯಾಗಿದ್ದಾರೆ. ಕನ್ನಡದ ಶಿವರಾಜಕುಮಾರ್, ಜಗಪತಿ ಬಾಬು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಎ.ಆರ್. ರೆಹಮಾನ್ ಸ್ವರ ಸಂಯೋಜನೆ ಮಾಡಿರುವ ಹಾಡುಗಳಿರುವ ಈ ಚಿತ್ರದ ಛಾಯಾಚಿತ್ರಗ್ರಾಹಕ ಆರ್. ರತ್ನವೇಲು. ಏಪ್ರಿಲ್ 30ರಂದು ಈ ಸಿನಿಮಾ ತೆರೆಕಾಣಲಿದ್ದು, ಸುಮಾರು ₹300 ಕೋಟಿ ಬಜೆಟ್ ವ್ಯಯ ಮಾಡಲಾಗಿದೆ. ಜನುಮ ದಿನಕ್ಕೆ ತಮ್ಮ ಇಷ್ಟದ ನಟನಿಗೆ ಶುಭ ಕೋರಿದ ಅಭಿಮಾನಿಗಳು ಸಿನಿಮಾ ಯಶಸ್ಸಿಗೆ ಹಾರೈಸಿ ತೆರಳಿದರು. ■